

ಸ್ತಬ್ಧರಾದ ರಾವು ಅವರು ಕೋಣೆಗೆ ಹೋಗಿ ಕುಳಿತರು. ಭೋರೆಂಬ ಆ ಗಾಳಿಯಲ್ಲಿ ಕಾಲು ಹಿಡಿತ ತಪ್ಪುತ್ತಿತ್ತು. ಬಟ್ಟೆ ಪೂರಾ ಒದ್ದೆಯಾಗಿತ್ತು. ಪೆಟ್ಟಿಗೆ ತೆರೆದು ಕೈಯಿಂದ ಅತ್ತಿತ್ತ ಹುಡುಕಿದರು. ಟಾರ್ಚು ಕೈಗೆ ತಾಕಿತು. ಹಿಡಿಸಲಾಗದ ಸಂತೋಷವುಂಟಾಯಿತು. ತಮ್ಮ ಪೆಟ್ಟಿಗೆಯಲ್ಲಿ ಟಾರ್ಚು ಇರುವುದೆಂಬ ಸಂಗತಿ ಅವರಿಗೆ ನೆನಪಿರಲಿಲ್ಲ. ಒದ್ದೆ ಬಟ್ಟೆ ಬಿಚ್ಚಿ ಒಣ ಬಟ್ಟೆ ತೊಟ್ಟರು. ಉಲ್ಲನ್ ಸ್ವೆಟರ್ ಧರಿಸಿದರು. ಮಫ್ಲರ್ ಅನ್ನು ಕಿವಿ, ತಲೆಗೆ ಸುತ್ತಿಕೊಂಡರು. ಪೆಟ್ಟಿಗೆಗೆ ಬೀಗ ಹಾಕುವುದನ್ನೂ ಮರೆತು ಕುರ್ಚಿಯಲ್ಲಿ ಕುಳಿತರು. ತನ್ನ ಸ್ಥಿತಿಯ ಬಗ್ಗೆ ಆಲೋಚಿಸುವುದು ಸಹ ಅವರಿಗೆ ಇಷ್ಟವಿರಲಿಲ್ಲ. ಅಷ್ಟರಲ್ಲಿ ರೈಲಿನ ದೀಪಗಳು ಚಲಿಸಿದವು. ಸ್ಟೇಷನ್ನಿನಲ್ಲಿ ಯಾರಾದರೊಬ್ಬರು ಇದ್ದೇ ಇರಬೇಕೆಂದು ನಿಶ್ಚಯಿಸಿಕೊಂಡು ಹೊರ ಬಂದರು. ಯಾರೋ ಇಬ್ಬರು ಪ್ಲಾಟ್‌ಫಾರಂ ದಾಟಿ ಹೋಗಲು ಪ್ರಯತ್ನಿಸುತ್ತಿದ್ದರು. ರಾವು ಅವರು ಕೊರಳೆತ್ತಿ ಕರೆದರು. ಇಬ್ಬರೂ ನಿಂತರು. ಒಬ್ಬರು ಸ್ಟೇಷನ್ ಮಾಸ್ಟರೆಂದು, ಇನ್ನೊಬ್ಬರು ಜವಾನನೆಂದು ರಾವು ಅವರು ಗುರುತಿಸಿದರು.

‘ನಾನು ಊರಿನೊಳಗೆ ಹೋಗಬೇಕು’ ಎಂದು ರಾವು ಅವರು ಆತುರದಿಂದ ಹೇಳಿದರು.

‘ತುಂಬಾ ಕಷ್ಟ. ರಸ್ತೆ ಮೇಲೆ ಅಂಗುಲ ಅಂಗುಲಕ್ಕೂ